ಒ ಎಸ್ 262/2022 ಪಿ.ಡಬ್ಲ್ಯೂ 1

ಇಂದು ದಿಃ 29.10.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ ಎಲ್ ಬಿ ವಕೀಲರಿಂದಃ

ನನ್ನ ಗಂಡನ ತಂದೆ ಮರಿಶೆಟ್ಟರು ಸುಮಾರು 20 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ಅವರ ಮಗ ದ್ವಾರಕೀಶು ಅವರು ಸಹ ಮೃತಪಟ್ಟಿರುತ್ತಾರೆ ಅವರು ನನ್ನ ಗಂಡ. ನನ್ನ ಮಾವ ಮತ್ತು ಗಂಡ ಬದುಕಿದ್ದಾಗ 2000 ಇಸವಿಯಲ್ಲಿ ಕುಟುಂಬದ ಆಸ್ತಿ ಬಾಯಿ ಮಾತಿನ ಮೂಲಕ ವಿಭಾಗ ಆಯಿತು ಎಂದರೆ ನನಗೆ ಗೊತ್ತಿಲ್ಲ. ಆ ಪೈಕಿ 1 ನೇ ಅನುಕ್ರಮ ಆಸ್ತಿಯ ಸರ್ವೆ ನಂ. 37/1ಬಿ 31 ಗುಂಟೆ ಜಮೀನು ನನ್ನ ಗಂಡನ ಹೆಸರಿಗೆ ಬಂತು ಎಂದರೆ ಸರಿಯಲ್ಲ. ಐಟಂ ಎ ಮತ್ತು ಬಿ ಆಸ್ತಿಗಳು ಪ್ರತಿವಾದಿ 1 ರಿಂದ 9 ರವರಿಗೆ ಭಾಗ ಹೋಯಿತು ಎಂದರೆ ಸರಿಯಲ್ಲ. ಆ ರೀತಿ ವಿಭಾಗ ಆದ ನಂತರ ನನ್ನ ಗಂಡ ಜೀವಂತ ಇದ್ದ ಸಮಯದಲ್ಲಿ ಅವರಿಗೆ ಬಂದ ಆಸ್ತಿಯನ್ನು ಸಿದ್ದಶೆಟ್ಟಿಗೆ ಕೊಡುತ್ತೇನೆ ಎಂದು ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕರಾರು ಆದ ತಕ್ಷಣ ನನ್ನ ಗಂಡ ಮೃತಪಟ್ಟರು ಎಂದರೆ ಕರಾರಿನ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಗಂಡ ಮೃತಪಟ್ಟ ತಕ್ಷಣ ಸಿದ್ದಶೆಟ್ಟರು ಬಂದು ನನ್ನ ಗಂಡ ಬರೆದುಕೊಟ್ಟ ಕ್ರಯದ ಕರಾರಿನಂತೆ ಆಸ್ತಿಯನ್ನು ಮಾರಾಟ ಮಾಡಿ ಎಂದು ನನ್ನಲ್ಲಿ ಕೇಳಿದ್ದರು ಎಂದರೆ ಸರಿಯಲ್ಲ.ನಂತರ ಸಿದ್ದಣ್ಣ 2ನೇ ಪ್ರತಿವಾದಿಗೆ ಹಸ್ತಾಂತರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಎ ಮತ್ತು ಬಿ ಆಸ್ತಿಗಳು ಪ್ರತಿವಾದಿ 1 ರಿಂದ 9 ರವರಿಗೆ ಬಂದ ಕಾರಣ ಅದನ್ನು 10 ರಿಂದ 12ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ ಮಾರಾಟದ ಹಣದಿಂದ 2ನೇ ಅನುಕ್ರಮ ಆಸ್ತಿಯನ್ನು 1 ರಿಂದ 9ನೇ ಪ್ರತಿವಾದಿಗಳು ಖರೀದಿಸಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳು ಈಗ ಮಾರಾಟ ಆಗಿರುವ ಕಾರಣ ಅವು ಅಸ್ಥಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. 1 ರಿಂದ 9ನೇ ಪ್ರತಿವಾದಿಗಳು 2ನೇ ಅನುಕ್ರಮ ಆಸ್ತಿಯನ್ನು ದಾವಾ ಎ ಮತ್ತು ಬಿ ಆಸ್ತಿಯನ್ನು ಮಾರಾಟ ಮಾಡಿದ ಆಸ್ತಿಯಿಂದಲೇ ಖರೀದಿಸಿದ್ದರು ಬೇರೆ ಹಣ ಇರಲಿಲ್ಲ ಎಂದರೆ ಸರಿ. 1 ರಿಂದ 9ನೇ ಪ್ರತಿವಾದಿಗಳು ನಮಗೆ ಕೊಡಬೇಕಾದ ಆಸ್ತಿ ಕೊಟ್ಟಿದ್ದಾರೆ ವಿಭಾಗ ಮಾಡುವ ಆಸ್ತಿ ಯಾವುದೇ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆಲಂಬೂರು ಗ್ರಾಮದಲ್ಲಿ ನನಗೆ ಸ್ವಂತ ಮನೆ ಇದೆ ಎಂದರೆ ಸರಿಯಲ್ಲ, ಸಣ್ಣ ಮನೆ ಇದೆ. 1 ರಿಂದ 9ನೇ ಪ್ರತಿವಾದಿಗಳು ಅವರ ಸ್ವಂತ ಮನೆಯಲ್ಲಿ ಇದ್ದಾರೆ ಎಂದರೆ ಸರಿ. ಆ ಸ್ವತ್ತು ಅವರಿಗೆ ಬಾಯಿ ಮಾತಿನ ಮೂಲಕ ಆದ ವಿಭಾಗದಂತೆ ಬಂದ ಆಸ್ತಿ ಎಂದರೆ ಸರಿ. ನಾನು ದಾವೆ ಸಲ್ಲಿಸುವ ಸಮಯಕ್ಕೆ 1ನೇ ಅನುಕ್ರಮ ಆಸ್ತಿ ಅಸ್ತಿತ್ವದಲ್ಲಿ ಇರಲಿಲ್ಲ ಮತ್ತು ಆ ಮೊದಲೇ ವಿಭಾಗ ಆಗಿರುತ್ತದೆ. ಆದರೂ ಸಹ 1 ರಿಂದ 9ನೇ ಪ್ರತಿವಾದಿಗಳಿಗೆ ಆಗದವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.